# **ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಖಾನಾಪೂರ**

## **ಸಿ.ಸಿ.ನಂಃ 1833/2018**

ಸರ್ಕಾರದ ಪರವಾಗಿ ಖಾನಾಪುರ ಪೋಲಿಸರು ... ಪಿರ್ಯಾದಿ.

:ವಿರುದ್ಧ:

**ಆ-1 ಛಾಯಾ ಸಂಜು ಖಾತೇದಾರ**

ವಾಸಃ ವಿದ್ಯಾನಗರ ಖಾನಾಪೂರ

**ಆ-2 ರೇಣುಕಾ ರಾಜು ಖಾತೇದಾರ**

ವಾಸಃ ವಿದ್ಯಾನಗರ ಖಾನಾಪೂರ

**ಆ-3 ಶೋಭಾ ಭಿಮರಾವ್ ಅಸೋದೆ**

ವಾಸಾಃ ಕರಿಕಟ್ಟಿ, ಖಾನಾಪೂರ.

...ಆರೋಪಿತರು.

## **ದೋಷಾರೋಪಣೆ**

ಸೂರ್ಯನಾರಾಯಣ.ಎಸ್. ಬಿ.ಎ.ಎಲ್., ಎಲ್.ಎಲ್.ಬಿ. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ ಆದ ನಾನು ಆರೋಪಿತರ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ಖಾನಾಪೂರ ಪಟ್ಟಣದ ತಾರಾರಾಣಿ ಹೈಸ್ಕೂಲ ಹತ್ತಿರ ವಿದ್ಯಾನಗರದಲ್ಲಿ ಚಾಸಾ. 1 ಹಾಗೂ ಚಾಸಾ. 4 ರವರು ಮನೆಯಲ್ಲಿದ್ದಾಗ ದಿನಗಂಕಃ 18.07.2018 ರಂದು 12.30 ಗಂಟೆಗೆ ಚಾಸಾ. 1 ರವರ ಹತ್ತಿರ ಬಂದು ನೀನು ಗಂಡನ ಮನೆಗೆ ಹೋಗು ತವರು ಮನೆಯಲ್ಲಿ ಯಾಕೆ ಬಂದು ಉಳೀದಿ ಅಂತಾ ತಂಟೆ ತಕರಾರು ಮಾಡಿ, 1 ನೇ ಆರೋಪಿತಳು ಕೈಯಿಂದ ಮುಖಕ್ಕೆ ಭುಜಕ್ಕೆ ಬಡಿದು ಹಾಗೂ ಕಾಲಿನಿಂದ ಹೊಟ್ಟೆಗೆ ಒದ್ದು ಒಳಗಾಯ ಪಡಿಸಿ, ಸಾದಾ ಸ್ವರೂಪದ ಗಾಯ ಪಡಿಸಿದ್ದು, ಆ ರೀತ್ಯಾ ಭಾ.ದಂ.ಸಂ. ಕಲಂ.323 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮೇಲ್ಕಂಡ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಮುಂದುವರೆದು ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ, 1 ನೇ ಆರವೋಪಿಯು ಹಿಡಗೈ ಅಳತೆಯ ಕಲ್ಲಿನಿಂದ ಹೊಟ್ಟೆಗೆ ಒಗೆದು ಸಾದಾ ಗಾಯ ಪಡಿಸಿ, 2 ಮತ್ತು 3 ನೇ ಆರೋಪಿತರುಗಳು ಚಾಸಾ. 1 ರವರಿಗೆ ಕೈ ಹಿಡಿದು ಜಗ್ಗಾಡಿ, ಕೈಯಿಂದ ಬಡಿಯುತ್ತಿರುವಾಗ, ತಂಟೆ ಬಿಡಿಸಲು ಬಂದ ಚಾಸಾ. 4 ರವರುರವರಿಗೆ 1 ನೇ ಆರೋಪಿತಳು ಕೈಯಿಂದ ಮುಖಕ್ಕೆ ಬಡಿದು ನುಗಿಸಿ, ಕೆಳಗೆ ಬಿಳಿಸಿ ಸಾದಾ ಸ್ವರೂಪದ ಗಾಯ ಪಡಿಸಿದ್ದು, ಆ ರೀತ್ಯಾ ಭಾ.ದಂ.ಸಂ. ಕಲಂ.324 ಸಹ ಕಲಂ 34 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಅಪರಾಧ ಮಾಡಿರುತ್ತೀಯಾ.

ಮೇಲ್ಕಂಡ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಮುಂದುವರೆದು ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ, ಚಾಸಾ, 1 ರವರಿಗೆ '" ಬೋಸಡಿ ನೀನು ಹೊರಗೆ ಹೋಗು" ಅಂತಾ ಅವಾಚ್ಯ ಶಬ್ದಗಳಿಂದ ಬೈದು, ಸಾರ್ವಜನಿಕ ಶಾಂತಿಭಂಗವನ್ನುಂಟು ಮಾಡಲು ಪ್ರೇರೆಪಿಸಿದ್ದು, ಆ ರೀತ್ಯಾ ಭಾ.ದಂ.ಸಂ. 504 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮೇಲ್ಕಂಡ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಮುಂದುವರೆದು ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ, ಚಾಸಾ. 1 ರವರಿಗೆ ಜೀವ ಬೆದರಿಕೆ ಹಾಕಿ, ಅಪರಾಧಿಕ ಭಯೋತ್ಪಾದನೆಯನ್ನುಂಟು ಮಾಡಿದ್ದು, ಆ ರೀತ್ಯಾ ಭಾ.ದಂ.ಸಂ. ಕಲಂ.506 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ವಿವರಿಸಿ ತೆರೆದ ನ್ಯಾಯಾಲಯದಲ್ಲಿ ದಿನಾಂಕ:17.07.2022 ರಂದು ಓದಿ ಹೇಳಲಾಯಿತು. ಅದನ್ನು ಅವರು ತಿಳಿದು ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಡೀಕರಿಸುತ್ತೇನೆ.)

17/7/23

**(ಸೂರ್ಯನಾರಾಯಣ ಎಸ್)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.

ಖಾನಾಪೂರ
ದಿನಾಂಕ:**17.07.2023**

**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ**

**ನ್ಯಾಯಾಲಯ, ಖಾನಾಪೂರ**

**ಸಿ.ಸಿ.ನಂ:1833/2018**

ಸರ್ಕಾರದ ಪರವಾಗಿ ಖಾನಾಪುರ ಪೋಲಿಸರು ... ಪಿರ್ಯಾದಿ.

:ವಿರುದ್ಧ:

**ಆ-1 ಛಾಯಾ ಸಂಜು ಖಾತೇದಾರ**

...ಆರೋಪಿ.

**ಆಪಾದನೆ**

ಪ್ರಶ್ನೆ1 :ಈಗ ಓದಿ ಹೇಳಲಾದ ಆಪಾದನೆ ತಿಳಿಯಿತೇ?

ಉತ್ತರ : ತಿಳಿಯಿತು

ಪ್ರಶ್ನೆ2 : ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕಾ?

ಉತ್ತರ : ಇಲ್ಲ, ವಿಚಾರಣೆಯಾಗಬೇಕು

ಈ ಮೇಲ್ಕಂಡ ಆಪಾದನೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ : 17 ನೇ ದಿವಸ, ಜುಲೈ ಮಾಹೆ 2023

17/7/23

**(ಸೂರ್ಯನಾರಾಯಣ ಎಸ್)**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.

**<u>ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ</u>**

**<u>ನ್ಯಾಯಾಲಯ, ಖಾನಾಪೂರ</u>**

**<u>ಸಿ.ಸಿ.ನಂಃ1833/2018</u>**

ಸರ್ಕಾರದ ಪರವಾಗಿ ಖಾನಾಪುರ ಪೋಲಿಸರು ... ಪಿರ್ಯಾದಿ.

:ವಿರುದ್ದ:

**ಆ-2 ರೇಣುಕಾ ರಾಜು ಖಾತೇದಾರ**

...ಆರೋಪಿ.

**<u>ಆಪಾದನೆ</u>**

ಪ್ರಶ್ನೆ1 :ಈಗ ಓದಿ ಹೇಳಲಾದ ಆಪಾದನೆ ತಿಳಿಯಿತೇ?

ಉತ್ತರ : ತಿಳಿಯಿತು

ಪ್ರಶ್ನೆ2 : ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕಾ?

ಉತ್ತರ : ಸುಳ್ಳು ವಿಚಾರಣೆ ಆಗಬೇಕು

ಈ ಮೇಲ್ಲಂಡ ಆಪಾದನೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ ಃ 17 ನೇ ದಿವಸ, ಜುಲೈ ಮಾಹೆ 2023

S 17/7/23

**(ಸೂರ್ಯನಾರಾಯಣ ಎಸ್)**

ರೇ. ರಾ. ಖಾತೇದಾರ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.

## ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಖಾನಾಪೂರ

**ಸಿ.ಸಿ.ನಂಃ1833/2018**

ಸರ್ಕಾರದ ಪರವಾಗಿ ಖಾನಾಪುರ ಪೋಲಿಸರು ... ಪಿರ್ಯಾದಿ.

:ವಿರುದ್ಧ:

**ಆ-3 ಶೋಭಾ ಭಿಮರಾವ್ ಅಸೋದೆ**

...ಆರೋಪಿ.

### ಆಪಾದನೆ

ಪ್ರಶ್ನೆ1 :ಈಗ ಓದಿ ಹೇಳಲಾದ ಆಪಾದನೆ ತಿಳಿಯಿತೇ?

ಉತ್ತರ : ತಿಳಿಯಿತು

ಪ್ರಶ್ನೆ2 : ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕಾ?

ಉತ್ತರ : ತಪ್ಪು, ವಿಚಾರಣೆ ಆಗಬೇಕು

ಈ ಮೇಲ್ಕಂಡ ಆಪಾದನೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ ಃ 17 ನೇ ದಿವಸ, ಜುಲೈ ಮಾಹೆ 2023

17/7/23

**(ಸೂರ್ಯನಾರಾಯಣ ಎಸ್)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.